

## ಎಮ್ಮೆ ಕರ...

ಕೊಟ್ಟಿಗೆಯಲ್ಲಿ ಎಮ್ಮೆ ಕರು ಹಾಕಿದ ಸುದ್ದಿ ಕೇಳಿದ ಪುಟ್ಟ ಸಂಭ್ರಮದಿಂದ ಕರು ನೋಡಲು ಓಡಿದ. ಅದೇ ಸಮಯಕ್ಕೆ ಅವನ ಅಜ್ಜಿ, 'ಲಂಬೋದರ ಲಕುಮಿಕರ...' ಎಂದು ದೇವರ ನಾಮ ಗುನುಗುತ್ತಿದ್ದರು. ಕೊಟ್ಟಿಗೆಯಿಂದ ಹಿಂದಿರುಗಿದ ಪುಟ್ಟ 'ಕೊಟ್ಟಿಗೆಯಲ್ಲಿರುವುದು ಎಮ್ಮೆ ಕರ...' ಎಂದು ಅದೇ ರಾಗದಲ್ಲಿ ಪ್ರಾಸಬದ್ಧವಾಗಿ ದನಿಗೂಡಿಸಿದ್ದು ಕೇಳಿ ಎಲ್ಲರೂ ನಕ್ಕರು.

**ನಗರ ಗುರುದೇವ್ ಭಂಡಾರ್ಕರ್**





## ಆಡಿ ಆಡಿ ಸುಸ್ತಾದ

ನಮ್ಮ ಅತ್ತೆಯವರಿಗೆ 82 ವರ್ಷ. ಐದು ಮಕ್ಕಳು, ಸೊಸೆಯಂದಿರು, ಅಳಿಯ, ಎಂಟು ಮೊಮ್ಮಕ್ಕಳು, ಮೂರು ಮರಿಮೊಮ್ಮಕ್ಕಳನ್ನೂ ಕಂಡ ಪುಣ್ಯವಂತೆ. ಈಗಲೂ ಚುರುಕಾಗಿದ್ದು, ಎಲ್ಲವನ್ನೂ ಸಂಭ್ರಮದಿಂದ ಅನುಭವಿಸುತ್ತಾರೆ. ಮರಿಮೊಮ್ಮಗನಿಗೆ ನಾಲ್ಕು ತಿಂಗಳು ತುಂಬಿದ್ದು, ಸೊಸೆ ಆತನ ಆಟದ ಸಣ್ಣ ವಿಡಿಯೊ ಒಂದನ್ನು ವಾಟ್ಸ್ಆ್ಯಪ್‌ಗೆ ಹಾಕಿದ್ದಳು. ಅದನ್ನ ಅತ್ತೆಗೆ ತೋರಿಸಿದರು. ನೋಡ ನೋಡುತ್ತಿದ್ದಂತೆ ವಿಡಿಯೊ ತುಣುಕು ಮುಗಿಯಿತು. ಅತ್ತೆ ನಗುತ್ತಾ, 'ನೋಡಿದ್ಯಾ? ಆಡಿ ಆಡಿ ಸುಸ್ತಾಗಿ ಮಲಗಿಬಿಟ್ಟ!' ಎಂದು ಹೇಳುವುದೆ!

**ಡಾ. ರೇವತಿ ಎಂ. ಅಗ್ನಿಹೋತ್ರಿ**

ಚಿತ್ರಗಳು: ಗಣೇಶ ಆಚಾರ್ಯ